

ಸಂಪಾದಕೀಯ

# ‘ಮರಳಿ ಮಣ್ಣಿಗೆ’ ?

ಲೌಕಿಕ ಜೀವನದಲ್ಲಿ, ಹತ್ತು ಹಲವು ಬದಲಾವಣೆಗಳ ನಡುವೆ ಮಾನವನ ಆದರ್ಶ, ದೃಷ್ಟಿಕೋನ, ಧೋರಣೆಗಳೂ ಕಾಲಕಾಲಕ್ಕೆ ಬದಲಾಗುತ್ತವೆ. ಹಿಂದೆ ಇದ್ದ ದೃಷ್ಟಿಕೋನ ಇಂದಿಲ್ಲ. ಹಳೆಯ ಮನೋಭಾವ ಇಂದಿನ ಜನರಿಗಿಲ್ಲ. ಜನರ ಮನಸ್ಸನ್ನು ರೂಪಿಸುವ ಅನೇಕ ಸಂಗತಿಗಳು, ಪ್ರೇರಣೆಗಳು ಅನೇಕ ಬಾರಿ ಅಗೋಚರ; ಆದರೆ ನುರಿತ ಚಿಂತಕರು ಅವನ್ನು ಪತ್ತೆ ಹಚ್ಚಿ ವಿಶ್ಲೇಷಿಸಬಲ್ಲರು. ಆದರೆ, ಎಲ್ಲ ಬದಲಾವಣೆಗಳ ನಡುವೆ, ಜಗತ್ತಿನ ಏರುಪೇರುಗಳ ನಡುವೆ ಕೆಲವು ಭಾವನೆಗಳು ಪದೇ ಪದೇ ಮರುಕಳಿಸುತ್ತವೆ. ನಮ್ಮ ಬದುಕಿನ ಗೊತ್ತುಗುರಿಯನ್ನು ಹೊಸ ದಿಕ್ಕಿನತ್ತ ಹರಿಸುತ್ತವೆ. ಒಮ್ಮೊಮ್ಮೆ ಜೀವನಗತಿಯ ಅಪಾಯಕಾರಿ ಪರಿಸ್ಥಿತಿಯನ್ನು ಎಚ್ಚರಿಸಿ, ಸರಿದಾರಿಗೆ ತರುವ ಯತ್ನವನ್ನು ಮಾಡುತ್ತವೆ. ಇಂಥ ಭಾವನೆಗಳಲ್ಲಿ ಒಂದು, ಮತ್ತೆ ‘ಮಣ್ಣಿಗೆ ಮರಳುವ’ ಆದರ್ಶ.

## ಈ ಭಾವನೆಯ ಹಿನ್ನೆಲೆ

ಕನ್ನಡದಲ್ಲಿ ಶಿವರಾಮ ಕಾರಾಂತರ ‘ಮರಳಿ ಮಣ್ಣಿಗೆ’ ಎಂಬ ಕಾದಂಬರಿ ಅತ್ಯಂತ ಜನಪ್ರಿಯವಾಗಿದೆ. ಈ ಕೃತಿಯಲ್ಲಿ ಮೂಡಿಬಂದಿರುವ ಆದರ್ಶವು ಕಳೆದ ಶತಮಾನದ ಆರಂಭದಲ್ಲಿ ಕಾಣಿಸಿಕೊಂಡ ಹೊಸ ಜೀವನವನ್ನು ಕಟ್ಟುವ, ಹಳೆಯ ಜೀವನ ಮೌಲ್ಯಗಳಿಗೆ ಮರಳುವ, ಜೀವಂತಿಕೆಯನ್ನು ಎತ್ತಿ ಹಿಡಿಯುವ ಮನೋಭಾವಕ್ಕೆ ಉತ್ತಮ ಉದಾಹರಣೆಯಾಗಿದೆ. ಈ ಚಿಂತನೆ ಭಾರತದಲ್ಲಿ ಮೂಡಿಬರುವ ಮೊದಲು ಇಂಗ್ಲೀಷ್ ಸಾಹಿತ್ಯದಲ್ಲಿ, ಜಾಗತಿಕ ಇತಿಹಾಸದಲ್ಲಿ , ‘ಪುನರುತ್ಥಾನ’ದ ಸಂದರ್ಭದಲ್ಲಿ ಹಾಗೂ ಫ್ರೆಂಚ್ ಕ್ರಾಂತಿಯೇ ಮೊದಲಾದ ಚಳುವಳಿಗಳ ಸಮಯದಲ್ಲಿ ಹುಟ್ಟಿಕೊಂಡಿದ್ದಿದೆ. ಹಲವು ಸಾಮಾಜಿಕ, ರಾಜಕೀಯ ಏರುಪೇರುಗಳಿಂದ ಜನಸಾಮಾನ್ಯರ ಬದುಕು ಅಸ್ತವ್ಯಸ್ತಗೊಳ್ಳುತ್ತದೆ; ಅದರೊಂದಿಗೆ ಹೊಸ ಸಮಸ್ಯೆಗಳು ಹುಟ್ಟಿಕೊಳ್ಳುತ್ತವೆ. ಇದರ ಜೊತೆಗೆ ಕಳೆದುಹೋದ ಸುಂದರ ಜೀವನದ ಕ್ಷಣಗಳು ಮಾನವನ ಮನಸ್ಸನ್ನು ಕಾಡತೊಡಗುವುದು. ಪರಿಣಾಮವಾಗಿ, ಮತ್ತೆ ಹಳೆಯ ಬದುಕನ್ನು ಕಟ್ಟುವ, ಹಳೆಯ ಸಮೃದ್ಧಿಗೆ ಮರಳುವ ಚಳುವಳಿಯೊಂದು ಹುಟ್ಟಿಕೊಳ್ಳುತ್ತದೆ. ಈ ಬಗೆಯ ಬದಲಾವಣೆಗಳು ಪ್ರಪಂಚದ ಎಲ್ಲೆಡೆ ಕಂಡುಬಂದಿವೆ.

ಹೇಗೆ ಜೀವನದ ಧೋರಣೆ, ಆದರ್ಶಗಳು ಬದಲಾಗುತ್ತವೆಯೋ, ಅದೇ ಬದಲಾವಣೆಗಳು ಸಾಹಿತ್ಯ ಕೃತಿಗಳಲ್ಲಿ ವ್ಯಕ್ತವಾಗುತ್ತವೆ. ಕಲೆ, ಸಾಹಿತ್ಯಗಳು ಜೀವನದ ಪ್ರತಿಬಿಂಬವಾಗಿ ಕಾಣಿಸಿಕೊಳ್ಳುತ್ತವೆ; ಕೆಲವೊಮ್ಮೆ ಅವೇ ಮತ್ತೆ ಜೀವನದ ಮೇಲೂ ಪ್ರಭಾವ ಬೀರುತ್ತವೆ. ಮತ್ತೆ ಮಣ್ಣಿಗೆ ಮರಳುವ, ಗ್ರಾಮೀಣ ಸರಳ ಸುಂದರ ಬದುಕಿಗೆ ಹಿಂದಿರುಗುವ ಆಲೋಚನೆ ಹಾಗೂ ಪ್ರಯತ್ನ ಅನೇಕ ಬಾರಿ, ಹಲವು ನೆಲೆಗಳಲ್ಲಿ ನಡೆದಿವೆ. ಹೇಗೆ ಉದ್ಯೋಗಕ್ಕಾಗಿ, ವಿದ್ಯಾಭ್ಯಾಸ ಹಾಗೂ ಸಂಪಾದನೆಗಾಗಿ ಹಳ್ಳಿಯನ್ನು ಬಿಟ್ಟು ನಗರಗಳಿಗೆ ವಲಸೆ ಹೋಗುವುದು ಒಂದು ಬಗೆಯ ಚಲನೆಯೋ, ಅದೇ ರೀತಿ ನಗರ ಜೀವನದ ಸಂಕೀರ್ಣ, ಜಡ, ಯಾಂತ್ರಿಕ ಬದುಕಿಗೆ ಬೇಸತ್ತು ಮತ್ತೆ ಹಳೆಯ ಜೀವನಕ್ಕೆ ಮರಳುವುದೂ ಒಂದು ಚಲನೆ. ಪರಸ್ಪರ ಹೋಲಿಸಿ ನೋಡಿದಾಗ, ಮೊದಲನೆಯದು ಪ್ರಮುಖವಾಗಿ ಜನರ ಅಗತ್ಯವಾಗಿ, ಅನಿವಾರ್ಯತೆಯಾಗಿ ಕಂಡುಬರುತ್ತದೆ; ಎರಡನೆಯದು ಒಂದು ಆದರ್ಶವಾಗಿ ಕಂಡುಬರುತ್ತದೆ. ಮೊದಲನೆಯದು ಅಪಾರ ಪ್ರಮಾಣದಲ್ಲಿ, ಎಲ್ಲೆಡೆ ನಡೆಯುತ್ತದೆ; ಎರಡನೆಯದು ವೈಯಕ್ತಿಕ ನೆಲೆಯಲ್ಲಿ, ಬೌದ್ಧಿಕ-ಭಾವನಾತ್ಮಕ ಹಿನ್ನಲೆಯಲ್ಲಿ ನಡೆಯುತ್ತದೆ – ಹೀಗಾಗಿ ಇದು ಅಲ್ಪ ಪ್ರಮಾಣದಲ್ಲಿ ಮಾತ್ರ.

## ಮಣ್ಣು ಮತ್ತು ಮಾನವ

ಮಣ್ಣು ಎಂಬುದು ಭೂಮಿಯಲ್ಲಿ ದೊರಕುವ ಒಂದು ವಸ್ತುವಷ್ಟೇ ಅಲ್ಲ; ‘ವಿಶಾಲವಾದ ಭೂಮಿ’ ಎಂಬಷ್ಟು ವ್ಯಾಪಕವಾದ ಅರ್ಥವನ್ನು ಕೊಡಬಲ್ಲ ಅಚ್ಚಗನ್ನಡ ಪದ. ಈ ಪದದ ಹಿಂದೆ ಅದೆಷ್ಟು ಆಳವಾದ ಅರ್ಥ ಅಡಗಿದೆ ! ಭಾವಿಸಿದಷ್ಟೂ ಈ ಪದದ ಅರ್ಥ ಮಡುಗಟ್ಟುತ್ತದೆ, ಅದರ ಹಲವಾರು ಪದರಗಳು ಬಿಚ್ಚಿಕೊಳ್ಳುತ್ತವೆ. ನಮ್ಮ ಭಾವನೆಗಳಿಗೆ ಹತ್ತಿರವಾದ, ನಮ್ಮ ಅಸ್ತಿತ್ವಕ್ಕೆ ತಳಹದಿಯಾದ, ಜೀವನದ ಎಲ್ಲ ಒಲವು-ನಲಿವುಗಳನ್ನು ಒಳಗೊಳ್ಳುವ ಒಂದು ಮೂರ್ತ ಸತ್ಯವಾಗಿ ‘ಮಣ್ಣು’ ಎಂಬ ಪದವನ್ನು ನಾವು ಬಳಸುತ್ತೇವೆ. ಹಾಗೆ ನೋಡಿದರೆ, ಮಣ್ಣಿಗೂ ಮಾನವನಿಗೂ ಇರುವ ಸಂಬಂಧ ಅನಾದಿಯಾದದ್ದು. ಎಂದು ಮಾನವನ ಉದಯವಾಯಿತೋ ಆಗಲೇ ಮಣ್ಣು ಇತ್ತು ; ಅದಕ್ಕೂ ಮೊದಲೇ ಇತ್ತು . ಮಾನವನ ಹುಟ್ಟು, ಅವನ ಓಡಾಟ